## ನಿಮ್ಮೊಡನೆ

# ವನ್ಯಜೀವಿ ಸಂಘರ್ಷ ಸಹಬಾಳ್ವೆಯಾಗುವುದು ಹೇಗೆ?

> ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಡಾನೆ ದಾಳಿಯಿಂದ ಕೂಲಿ ಕಾರ್ಮಿಕರಿಬ್ಬರು ಈಚೆಗೆ ಪ್ರಾಣ ಕಳೆದುಕೊಂಡರು. ತಪ್ಪು ಯಾರದು ಎಂದು ಕೂದಲು ಸೀಳುವ ಕೆಲಸ ಮಾಡದೆ, ಶಾಶ್ವತ ಪರಿಹಾರಕ್ಕಾಗಿ ಕ್ರಮಕೈಗೊಳ್ಳುವ ಪ್ರಯತ್ನಗಳು ಆಗಬೇಕು.

ಕಾಡಾನೆ ದಾಳಿಯಿಂದಾಗಿ ಇಬ್ಬರು ಕೂಲಿಕಾರ್ಮಿಕರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ವಿಜಯನಗರ ಜಿಲ್ಲೆಯಿಂದ ಹೊಟ್ಟೆಪಾಡಿಗೆ ಕೆಲಸ ಹುಡುಕಿಕೊಂಡು ಬಂದವರು ಶವವಾಗಿ ಮರಳಿದ್ದಾರೆ. ಇದ್ದೂರಲ್ಲಿಯೇ ಕೆಲಸ ಸಿಕ್ಕಿದ್ದರೆ, ಕೆಲಸ ಹುಡುಕಿಕೊಂಡು ದೂರದೂರಿಗೆ ಬಾರದಿದ್ದರೆ, ಅವರಿಗೆ ತುಂಡು ಜಮೀನಿದ್ದರೆ, ಓದಿ ಬರೆದು ಕೆಲಸಕ್ಕೆ ಸೇರಿದ್ದರೆ ಹೀಗೆ ಹಲವಾರು ಪ್ರಶ್ನೆಗಳನ್ನು ಉಳಿಸಿದ್ದಾರೆ, ಕಾಡಾನೆಯ ಕಾಲಿಗೆ ಸಿಲುಕಿ ಅಳಿದವರು.

ನಮ್ಮ ಕಾಡುಗಳನ್ನು ಅತಿಕ್ರಮಿಸಿರುವ ಪಾರ್ಥೇನಿಯಂ, ಲಂಟಾನದಿಂದಾಗಿ ಆನೆಗಳಿಗೆ ಬೇಕಿರುವ ಮೇವು ಸಿಗುತ್ತಿಲ್ಲ. ಕಾಡಿನಲ್ಲಿ, ಕಾಡಿನಂಚಿನಲ್ಲಿ ಆಗುತ್ತಿರುವ ಕಾಮಗಾರಿಗಳಿಂದಲೂ ಕಾಡಿನ ಭೂಮಿ ಬರಡಾಗುತ್ತಿದೆ. ಮೇವಿಲ್ಲದೆ, ನಾಡಿಗೆ ಬರುವ ಆನೆಗಳು, ಇಲ್ಲಿಯ ಹಲಸಿಗೆ, ಬಾಳೆಗೆ, ಕಾಫಿ ತೋಟದಲ್ಲಿ ಹೇರಳವಾಗಿ ಸಿಗುವ ಮೇವಿಗೆ, ಕಬ್ಬಿನ ಗದ್ದೆಗಳಿಗೆ ದಾಂಗುಡಿ ಇಡುತ್ತಿವೆ. ಕರ್ನಾಟಕದಲ್ಲಿ ವನ್ಯಜೀವಿ ಸಂಘರ್ಷದಲ್ಲಿ ಅತಿಹೆಚ್ಚು ಹಾನಿಯಾಗಿರುವುದು ಆನೆ ದಾಳಿಯಿಂದ. ನಂತರದ ಸ್ಥಾನ ಚಿರತೆ, ಕಾಡುಹಂದಿ ಹಾಗೂ ಕರಡಿಗಳ ದಾಳಿಗೆ. ವನ್ಯಜೀವಿ ಸಂಘರ್ಷದಲ್ಲಿ ಪ್ರಾಣಹಾನಿಯಾದರೆ ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಯು ಪರಿಹಾರ ಧನವನ್ನೂ ನೀಡುತ್ತಿದೆ. ಆದರೆ ಸಾಕಷ್ಟು ಪ್ರಕರಣಗಳು ವಿಲೇವಾರಿ ಆಗದೆ ಉಳಿದಿವೆ. ಆದರೆ ಈ ಎಲ್ಲ ಪ್ರಕರಣಗಳಲ್ಲಿಯೂ ನೆನಪಿನಲ್ಲಿರಿಸಿಕೊಳ್ಳಬೇಕಾದ ಅಂಶವೆಂದರೆ ಈ ಪ್ರಾಣಿಗಳಿಗೆ ಯಾವತ್ತಿಗೂ ಮನುಷ್ಯರು ಗುರಿಯಾಗಿರುವುದಿಲ್ಲ.

ಶಾಶ್ವತ ಪರಿಹಾರಕ್ಕೆ ಪರ್ಯಾಯ ಉಪಾಯಗಳನ್ನು ಕಂಡುಕೊಳ್ಳಬೇಕಿದೆ. ಸರ್ಕಾರ ನೀಡುವ ಪರಿಹಾರಗಳು ಜೀವಹಾನಿಯಾದಾಗ ಮತ್ತು ಗಾಯಾಳುಗಳಾದಾಗ ಮಾತ್ರ. ಆ ಪರಿಹಾರವೂ ಸಕಾಲಕ್ಕೆ ಸಿಗುವುದೇ ಕಡಿಮೆ. ಪ್ರಾಣಿ ಮತ್ತು ಮಾನವ ಸಂಘರ್ಷದ ಈ ಸಂದರ್ಭದಲ್ಲಿ ಪ್ರಾಣಿಗಳ ಕಡೆಯೂ ಅಂತಃಕರಣೆಯಿಂದಲೇ ನೋಡಬೇಕಾಗಿದೆ. ವನ್ಯಜೀವಿಗಳು ಮತ್ತು ಮನುಷ್ಯರು ಇವೆರಡರಲ್ಲಿ ಯಾರ ಜೀವ ಹೆಚ್ಚು ಅಮೂಲ್ಯ ಎಂಬ ಪ್ರಶ್ನೆ ಎದುರಾದಲ್ಲಿ, ಖಂಡಿತವಾಗಿಯೂ ಎರಡೂ ಅಷ್ಟೇ ಮುಖ್ಯ. ಬದುಕುವ ಹಕ್ಕು ಮಾನವನಿಗಿದ್ದಂತೆ ಜೀವಿಸುವ ಹಕ್ಕು ಅವಕ್ಕೂ ಇವೆ. ಅತಿಕ್ರಮಣವಾಗಿರುವುದು ವನ್ಯಜೀವಿಗಳಿಂದಲ್ಲ, ಅವುಗಳ ವಾಸಸ್ಥಾನ, ಅವುಗಳ ಪಥದ ಮೇಲೆ ಮನುಷ್ಯರಿಂದಲೇ ಅತಿಕ್ರಮಣವಾಗಿದೆ.

ಇವೆರಡರ ನಡುವೆ ಸಮನ್ವಯ ಸಾಧಿಸುವುದು, ಸಹಬಾಳ್ವೆ ಸಾಧಿಸುವುದು ಕ್ರೌರ್ಯದಿಂದ ಸಾಧ್ಯವೇ ಇಲ್ಲ. ಸಾಧುವೂ ಅಲ್ಲ. ಸದ್ಯಕ್ಕೆ ತಿಳಿವಳಿಕೆ ಇರುವ ಮನುಷ್ಯರಿಂದಲೇ ಸೌಹಾರ್ದ ಸಾಧಿಸಬೇಕಿರುವುದು ಅತಿ ಜರೂರಿನ ಕೆಲಸವಾಗಿದೆ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಹಲವಾರು ಅಧ್ಯಯನಗಳೂ, ಪ್ರಯೋಗಗಳೂ ನಡೆಯುತ್ತಿವೆ. ಇಷ್ಟರ ನಡುವೆಯೂ ಪ್ರಾಣಹಾನಿಯಂಥ ಅವಘಡಗಳು ಜರುಗುತ್ತಿರುವುದು ಸೌಹಾರ್ದ ಸಾಧಿಸುವಲ್ಲಿ ಹಿನ್ನಡೆ ಉಂಟು ಮಾಡುತ್ತವೆ. ಸರ್ಕಾರ ಪರಿಹಾರ ಕಾರ್ಯಕ್ಕೆ ನೀಡುವಷ್ಟೇ ಮಹತ್ವ ಜಾಗೃತಿಕಾರ್ಯಗಳಿಗೂ ನೀಡಬೇಕು. ರಾಜ್ಯದ ಅರ್ಧದಷ್ಟು ಜಿಲ್ಲೆಗಳಲ್ಲಿ ವನ್ಯಜೀವಿ ಸಂಘರ್ಷ ಸಮಸ್ಯೆಯಾಗಿ ಮಾರ್ಪಟ್ಟಿರುವಾಗ ಜಾಗೃತಿಕಾರ್ಯಗಳನ್ನು ಅಭಿಯಾನದಂತೆ ಕೈಗೊಳ್ಳಬೇಕಿದೆ.

ಕಾಡು ಬೆಳೆಸುವುದಷ್ಟೇ ಅಲ್ಲ, ಹುಲ್ಲುಗಾವಲನ್ನೂ ಬೆಳೆಸಬೇಕಾಗಿದೆ. ಸ್ಥಳೀಯ ಭೌಗೋಳಿಕ ಪ್ರದೇಶಗಳಿಗೆ ಹೊಂದುವ ತಳಿಯ ಹುಲ್ಲು ಬೆಳೆಸುವುದು, ನೀರಿನ ಒರತೆಗಳನ್ನು ಸೃಷ್ಟಿಸುವುದು, ನೀರಿನ ಹೊಂಡಗಳನ್ನು ಮಾನವ ಶ್ರಮದಿಂದಲೇ ನಿರ್ಮಿಸುವುದು, ಕಾಡುಪ್ರಾಣಿಗಳ ಆವಾಸಸ್ಥಾನವನ್ನು ನೆಲೆಯೋಗ್ಯವಾಗಿಸುತ್ತವೆ. ಜಲಮರುಪೂರಣದಂಥ ಪ್ರಯೋಗಗಳು ಕಾಡಿನಂಚಿನಲ್ಲಿಯೂ, ಕಾಡಿನೊಳಗೂ ಆಗಬೇಕು. ಹನಿ ನೀರಿಗಾಗಿ, ಮೇವಿಗಾಗಿ ತಮ್ಮ ಗಡಿ ದಾಟುವ ಈ ಪ್ರಾಣಿಗಳ ಆವಾಸ ಸ್ಥಾನಗಳನ್ನು ಅತಿಕ್ರಮಣ ಮಾಡಿಕೊಂಡಿರುವ ಮನುಷ್ಯ ಈಗ ಸಂತ್ರಸ್ತನಂತೆ ವರ್ತಿಸುವುದು ಬಿಡಬೇಕಾಗಿದೆ.

ಹುಲ್ಲುಗಾವಲಿನ ಕೊರತೆಯಿಂದಲೇ ಕೃಷ್ಣಮೃಗ, ಜಿಂಕೆ, ಚಿಗರೆಗಳು ಹೊಲಗಳತ್ತ ಮುಖ ಮಾಡಿವೆ. ಬಿತ್ತಿದ ಬೀಜಗಳು ಅಂಕುರವೊಡೆದು ಸಸಿಯಾಗುವಾಗ ಇವು ಭಕ್ಷಿಸಿ ಜನರ ಕೋಪಕ್ಕೆ ಬಲಿಯಾಗುತ್ತವೆ. ಸಸ್ಯಾಹಾರಿಗಳು ಕಾಡಿನಿಂದ ನಾಡಿನಂಚಿಗೆ ಬರುತ್ತಿರುವುದರಿಂದಲೂ ಮಾಂಸಾಹಾರಿ ಪ್ರಾಣಿಗಳು ಆಹಾರ ಅರಸಿಕೊಂಡು ಊರುಗಳತ್ತ ಮುಖಮಾಡುತ್ತಿವೆ. ಹುಲ್ಲುಗಾವಲುಗಳು ಮಾಯ ಆಗುವುದರಿಂದಾದ ಅನಾಹುತಗಳಿವು. ಕಾಡಿನಲ್ಲಿ ಲಂಟಾನಾ, ಪಾರ್ಥೇನಿಯಂನಂತಹ ಕಳೆ ಬೆಳೆದಿರುವುದು ಹುಲ್ಲುಗಾವಲಿನ ವಿನಾಶಕ್ಕೆ ಮುಖ್ಯ ಕಾರಣವಾಗಿದೆ.

ಭೂಮಿ ಎಲ್ಲರಿಗೂ ಸೇರಿದ್ದು. ಈಗಾಗಲೇ ಮಾನವನ ದುರಾಸೆಗಾಗಿ ಗಜಪಥಗಳು ಮಾಸಿಹೋಗಿವೆ. ದಕ್ಷಿಣ ರಾಜ್ಯಗಳಲ್ಲಿ ಅತಿ ಹೆಚ್ಚು ಪ್ರಾಣಿಗಳ ಸಾಂದ್ರತೆ ಮತ್ತು ಕಾಡಿನಲ್ಲಿ ಮರಗಳ ದಟ್ಟಣೆ ಇರುವ ಪ್ರದೇಶ ನಮ್ಮ ರಾಜ್ಯದೊಳಗೆ ಗಮನಾರ್ಹವಾಗಿದೆ. ಜೀವಿಗಳ ಬದುಕಿಗೆ ಬೇಕಿರುವ ಹುಲ್ಲುಗಾವಲನ್ನೂ ಸಂರಕ್ಷಿಸುವುದು, ಬೆಳೆಸುವುದು ಎರಡೂ ಗುರುತರ ಜವಾಬ್ದಾರಿಗಳಾಗಿವೆ. ಇಂಥ ಕ್ರಮಗಳು ಸಮಯವನ್ನೂ, ಮಾನವ ಶ್ರಮವನ್ನೂ, ಸಂಯಮವನ್ನೂ ಬಯಸುತ್ತವೆ. ಆದರೆ ವನ್ಯಜೀವಿ ಸಂಘರ್ಷವನ್ನು ಸಹಬಾಳ್ವೆಗೆ ಪರಿವರ್ತಿಸುವಲ್ಲಿ ಹೆಗ್ಗುರುತನ್ನೂ ಮೂಡಿಸುತ್ತವೆ.

■ ರಶ್ಮಿ ಎಸ್



ವಿಜಯ